HON'BLE MEMBERS.—Yes.

MADAM SPEAKER.—Permission to remain absent is granted.

(*ii*) **Sri V. B. Nooli, Grant of**

MADAM SPEAKER.—I have also received a letter from Sri V.B. Nooli, Member, Legislative Assembly, requesting leave of absence from attending the current sittings of the Assembly for ten days owing to some private reasons.

Is it the pleasure of the Assembly that permission be granted to Sri V. B. Nooli for remaining absent from the current sittings of the House for 10 days ?

HON'BLE MEMBERS.—Yes.

MADAM SPEAKER.—Permission to remain absent is granted.

Water and other facilities in the lounges

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಅಧ್ಯಕ್ಷಣಿಯವರೇ, ಹಾಲಿ ನಡೆಯುತ್ತಿರುವ ಅಧಿವೇಶನವನ್ನು ಪತ್ರಿಕೆಗಳಲ್ಲಿ 'ಬರಗಾಲದ ಅಧಿವೇಶನ' ಎಂದು ಕರೆಯುತಕ್ಕದ್ದು ನ್ಯಾಯವಾಗಿದೆ. ಏಕೆಂದರೆ ನೆನ್ನೆ ಮತ್ತು ಈ ದಿವಸ ನಹಾ ನಾನು ಶಾಸನ ಸಭೆಯ ಲಾಂಜಿನ ಆಕಡೆ ಮತ್ತು ಈ ಕಡೆ ಎರಡೂ ಪಕ್ಷಗಳಲ್ಲಿ ಎಲ್ಲ ನೋಡಿದರೂ ಕಾಫಿ ಸಿಕ್ಕುತ್ತಿಲ್ಲ ಹೋಗಲಿ ಕಡೆಗೆ ಕುಡಿಯಲು ನೀರಾದರೂ ಬೇಡವೇ ? ಈ ಪರಿಸ್ಥಿತಿ ಶಾಸಕರ ಭವನದಲ್ಲೂ ತಲೆದೋರಿದೆ ಎಂದು ಕೇಳಿದೆ....

ಅಧ್ಯಕ್ಷರು.—ಮಾನ್ಯ ಸದಸ್ಯರು ಯಾವ ವಿಷಯದಲ್ಲೇ ಆಗಲೀ ಇಷ್ಟೊಂದು ಉತ್ಪ್ರೇಕ್ಷೆ ಮಾಡಿ ಮಾತನಾಡಬಾರದು. ಕಾಫಿ ಸಿಕ್ಕುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಈ ದಿವಸ ಹೋಗಿ ಇವರು ನೋಡಿದ್ದಾರೆಯೇ ? ಇಲ್ಲಿ ಕುಡಿಯುವುದಕ್ಕೆ ನೀರೂ ಕೂಡ ಸಿಕ್ಕುತ್ತಿಲ್ಲ ಅಂದರೆ ಅದು ಉತ್ಪ್ರೇಕ್ಷೆಯಲ್ಲದೆ ಮತ್ತೇನು ?

ಶ್ರೀ ವಾಟಾಳ್ ನಾಗರಾಜ್.—ನಾನೇ ನಲ್ಲಿಯ ಹತ್ತಿರ ಹೋಗಿ ಕುಡಿದು ಬಂದೆ...

ಶ್ರೀ ಎಂ. ಎಸ್. ಕೃಷ್ಣನ್.—ಅದೂ ಲೇವೇಟ್ರಿಯಲ್ಲಿರತಕ್ಕ ನಲ್ಲಿಯಲ್ಲಿ. ಆದರೆ ಪ್ರತಿವರ್ಷ ಇಲ್ಲಿ ಅಧಿವೇಶನದ ಕಾಲಕ್ಕೆ ಯಾರಿಗೋ ಕಾಂಟ್ರಾಕ್ಟ್ ಕೊಟ್ಟು ಇಷ್ಟು ಒಂದು ವ್ಯವಸ್ಥೆಯನ್ನ ಮಾಡುತ್ತಿದ್ದರು. ಈ ಸಾರ್ತಿಯೂ ಹಾಗೇ ಒಂದು ವ್ಯವಸ್ಥೆಯನ್ನು ಏಕೆ ಮಾಡಲಿಲ್ಲ ? ಆಯಿತು ಇನ್ನು ತಕ್ಷಣ ಈ ಬಗ್ಗೆ ಸೂಕ್ತ ವ್ಯವಸ್ಥೆಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನಮಗೇನಾದರೂ ಇಲ್ಲಿ ಅನಾನುಕೂಲವಾದರೆ ನಾವು ಅಧ್ಯಕ್ಷಣಿಯವರ ಮನೆಗೇ ಹೋಗುತ್ತೇವೆ.

Matter of Privilege on the Remarks of the Chairman of the Backward Class Commission

ಶ್ರೀ ಎಸ್. ಎಂ. ಶೀರವಾಳಿ ಚಂದ್ರಶೇಖರ್ (ಹೊಸನಗರ).—ಮಾನ್ಯ ಅಧ್ಯಕ್ಷಣಿಯವರೇ ಮೊನ್ನೆ ತಾನೆ ಮಂಗಳೂರಿನಲ್ಲಿ ಆ ಹಿಂದುಳಿದ ಆಯೋಗದ ಅಧ್ಯಕ್ಷರು ಅಲ್ಲಿ ಭಾಷಣ ಮಾಡುತ್ತ ಅವರು ಈ ಮಾನ್ಯ ಸಭೆಯ ಬಗ್ಗೆ ಗುರುತರವಾದ ಆಪಾದನೆಗಳನ್ನು ಮಾಡಿದ್ದಾರೆ. ಹಿಂದುಳಿದ

ವರ್ಗದವರಿಗೆ ದೊರೆಯುತಕ್ಕ ಸೌಲಭ್ಯಗಳನ್ನು ಪೊಟಕು ಮಾಡತಕ್ಕ ವಂಚಕರು ಈ ಶಾಸಕರು ಎಂದು ಹೇಳಿದ್ದಾರೆ. ಅವರ ಭಾಷಣದ ಪ್ರತಿಯೊಂದು ನನ್ನಲ್ಲಿದೆ ಬೇಕೆಂದರೆ ಅವನ್ನು ಸಭೆಯಲ್ಲಿ ಓದುತ್ತೇನೆ. ಅಲ್ಲದೆ ನಾನೇ ಈ ಸಭೆಯಲ್ಲಿ ಹಿಂದೆ ಬ್ರಿಂದಾವರ್ತಿ ಜಾತಿಗಳ ಆಧಾರದ ಮೇಲೆ ನಾವು ಯಾವುದನ್ನೂ ನಿರ್ಧಾರ ಮಾಡಬಾರದೆಂದು ಹೇಳಿದ್ದೇನೆ. ಅವರು ಅಲ್ಲಿ ಆ ರೀತಿ ಮಾತನಾಡಿ ಈ ಸಭೆಯ ಶಾಸಕರ ಹಕ್ಕು ಬಾಧ್ಯತೆಯ ಬಗ್ಗೆ ಒಂದು ಧಕ್ಕೆಯನ್ನು ಮಾಡಿದ್ದಾರೆಂದು ಹೇಳುತ್ತೇನೆ. ಆ ಬಗ್ಗೆ ನಾನು ಒಂದು ಪ್ರಿವಿಲೇಜ್ ಮೋಷನ್ನನ್ನು ಅಧ್ಯಕ್ಷರ ಕಡೆಗೆ ರವಾನಿಸಿದ್ದೇನೆ. ಅದರ ಬಗ್ಗೆ ಸೂಕ್ತ ನಡವಳಿಕೆಯನ್ನು ಕೈಗೊಳ್ಳಬೇಕೆಂದು ಅಧ್ಯಕ್ಷರಲ್ಲಿ ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ಆ ಪೇಪರನ್ನು ತರಿಸಿ ನೋಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಅವರು ಯಾವ ಒಬ್ಬ ವ್ಯಕ್ತಿಯನ್ನೂ ಕುರಿತು ಟೀಕೆ ಮಾಡಿಲ್ಲ. ಅವರು ಶಾಸನ ಸಭೆಯ ಸದಸ್ಯರ ಕರ್ತವ್ಯದ ಬಗ್ಗೆ ಟೀಕೆ ಮಾಡಿದ್ದಾರೆ. ಅವರು ಆ ಮಂಗಳೂರಲ್ಲಿ ಭಾಷಣ ಮಾಡಿದ ನಂತರ, ಮತ್ತೆ ಬೆಂಗಳೂರಿಗೆ ಬಂದ ನಂತರ ಇಲ್ಲಿ ಪತ್ರಿಕಾ ಕರ್ತರಲ್ಲಿ ಒಂದು ಹೇಳಿಕೆಯನ್ನು ಕೊಡುತ್ತಾ ಆ ಹಿಂದೆ ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನು ಸರಿಯೆಂದು ಎತ್ತಿ ಹಿಡಿದಿದ್ದಾರೆ. ಹಿಂದೆ ಅವರೇನು ಶಾಸಕರ ಬಗ್ಗೆ ಅವರನ್ನು ಆಲ್ಲಗಳೆದು ಒಂದು ಹೇಳಿಕೆ ಕೊಟ್ಟಿದ್ದಾರೋ ಅದನ್ನವರು ವರದಿ ಮಾಡಿರತಕ್ಕದ್ದು ಸರಿಯಾಗಿದೆ ಎಂದು ಒಪ್ಪಿ ಕೊಂಡಿದ್ದಾರೆ. ಆದರೆ ಅವರನ್ನು ಕರೆಸಿ ಕೇಳಬೇಕೇ ಬೇಡವೇ ಎಂಬುದು ಅಧ್ಯಕ್ಷರಿಗೆ ಬಿಟ್ಟಿದ್ದು.

ಅಧ್ಯಕ್ಷರು —ನಾನು ಆ ಎರಡು ದಿನಗಳ ಪತ್ರಿಕೆಗಳನ್ನೂ ತರಿಸಿ ನೋಡಿ ನಂತರ ಈ ವಿಚಾರದಲ್ಲಿ ಒಂದು ತೀರ್ಮಾನಕ್ಕೆ ಬರಬೇಕಾಗಿದೆ. ಅನಂತರ ಮುಂದಿನ ನಿರ್ಣಯದ ವಿಚಾರ.

ಶ್ರೀ ಕೆ. ಪ್ರಭಾಕರ್.—ಆ ವರದಿಯಲ್ಲಿ ಅಷ್ಟೇ ವಿಚಾರಗಳಲ್ಲದೆ ಇನ್ನೂ ಎರಡು ವಿಚಾರಗಳನ್ನು ಅದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದುದರಿಂದ ಒಟ್ಟಿಗೆ ಆ ಮೂರು ವಿಚಾರಗಳನ್ನೂ ಪರಿಶೀಲನೆಗೆ ತೆಗೆದುಕೊಂಡರೆ ಆಗ ಅದರ ತ್ರಿಕರ್ಣ ಶುದ್ಧಿ ಆದಂತಾಗುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ (ಹಾಸನ) —ರಿಲೀಫ್ ಕಾಮಗಾರಿಗಳ ಬಗ್ಗೆ ಕೆಲಸಗಳಾಗಿದ್ದರೂ ಹಣಪಾವತಿ ಆಗದೆ ನಿಂತಿರತಕ್ಕ ವಿಚಾರದಲ್ಲಿ ನಾನು ಒಂದು ಕಾಲ್ ಅಟೆನ್ಷನ್ ನೋಟೀಸನ್ನೂ ಕಳುಹಿಸಿಸ್ಪೇನೆ ಅದನ್ನು ಬೇಗ ಸರ್ಕಾರದವರು ಇತ್ಯರ್ಥ ಮಾಡದಿದ್ದರೆ ಆ ಸಂಬಂಧ ಪಟ್ಟ ಜನರು ಮಂತ್ರಿಗಳ ಮನೆಯ ಮುಂದೆ ಸತ್ಯಾಗ್ರಹ ಮಾಡಬೇಕೆಂದಿದ್ದಾರೆ...

ಅಧ್ಯಕ್ಷರು.—ಮಾನ್ಯ ಸದಸ್ಯರು ಒಂದು ಕಾಲ್‌ಅಟೆಷನ್ ನೋಟೀಸನ್ನು ಕೊಟ್ಟಿದ್ದಾರೆ. ಹಾಗೆ ನೋಟೀಸನ್ನು ಕೊಟ್ಟಮೇಲೆ ಮತ್ತೆ ಆ ವಿಚಾರ ಸಭೆಯಲ್ಲಿ ಬರತಕ್ಕ ಕಾಲದಲ್ಲಿ ಅದು ಬರಬೇಕೇ ವಿನಾ ಈಗ ಅದನ್ನು ಹೇಗೆ ಎತ್ತುವುದಕ್ಕೆ ಅವಕಾಶವಿದೆ ?

10-00 A. M.

ಶ್ರೀ ಎಚ್. ಎಸ್. ಸಿದ್ದಪ್ಪ.—ಮೈಸೂರು ವಿಶ್ವವಿದ್ಯಾನಿಲಯದ ನೀತಿಯ ಬಗ್ಗೆ ಸುಮಾರು ಹತ್ತು ದಿವಸಗಳ ಹಿಂದೆ ಒಂದು ಕಾಲ್ ಅಟೆನ್ಷನ್ ನೋಟೀಸ್ ಕಳಿಸಿದ್ದೆ, ಆದಿನ್ನೂ ಬಂದಿಲ್ಲ. ಈಗ ಪಿ. ಯು. ಸಿ. ಎರಡು ವರ್ಷ ಮಾಡಿದ್ದಾರೆ. ಹಿಂದೆ ಒಂದು ವರ್ಷ ವಿದ್ದು, ತೇರ್ಗಡೆಯಾದವರು ಡಿಗ್ರಿ ಕ್ಲಾಸಿಗೆ ಹೋಗಲು ಅವಕಾಶವಿತ್ತು. ಈಗ ಆ ಅವಕಾಶವನ್ನು ಪೊಟಕು ಮಾಡಿದ್ದಾರೆ. ಹಿಂದೆ ಒಂದು ವರ್ಷ ಪಿ. ಯು. ಸಿ. ಓದಿ ಡಿಗ್ರಿ ಕ್ಲಾಸಿಗೆ ಹೋಗಿರುವವರು ಮತ್ತೆ ಎರಡನೇ ವರ್ಷದ್ದನ್ನು ಓದಬೇಕೆಂದು ಮಾಡಿದ್ದಾರೆ. ಇದರಿಂದ ತೊಂದರೆಯಾಗಿದೆ.

ಅಧ್ಯಕ್ಷರು.—ಈಗ ಸಂಬಂಧಪಟ್ಟ ಮಂತ್ರಿಗಳಿಲ್ಲ, ತಾವು ಕಳಿಸಿರುವುದನ್ನು ವಿಚಾರಮಾಡಲಾಗುವುದು.

ಶ್ರೀ ಜಿ. ಪುಟ್ಟಸ್ವಾಮಿ.—ಈ ಸಭೆಯ ಕಾಲ ಬಹಳ ಪವಿತ್ರವಾದುದು, ಅದನ್ನು ದೃಷ್ಟಿಯಲ್ಲಿಟ್ಟು ಕಾಲಮಿತಿ ಮಾಡಿ ಅಧ್ಯಕ್ಷರು ಅವಕಾಶ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್.—ತಮಗೆ ಆದೇಶ ಕೊಡುತ್ತಿದ್ದಾರೆ, ಇದು ನನಗೆ ಅರ್ಥವಾಗುವುದಿಲ್ಲ.

ಅಧ್ಯಕ್ಷರು.—ಪ್ರಪಂಚದಲ್ಲಿ ಬಹಳ ಬುದ್ಧಿವಂತರನ್ನೇಕರಿಯುತ್ತಾರೆ. ಅವರ ಅಭಿಪ್ರಾಯ ತಿಳಿದುಕೊಳ್ಳುವುದರಲ್ಲಿ ತಪ್ಪೇನು ?